ಎಲ್ಲಿವರೆಗೆ ಮುಚ್ಚಿಡೋದು? ಬಹೋತ್ ಸಫೋಕೇಶನ್ ಹೋತಾಥಾ. ಒಂದು ರಾತ್ರಿ ಗಾಢನಿದ್ದೆಯಲ್ಲಿದ್ದಾಗ ನಾನವಳನ್ನು ಎಬ್ಬಿಸಿದೆ. ಎದ್ದು ಕುಳಿತುಕೋ ಎಂದೆ ಮತ್ತು ಎಲ್ಲ ಹೇಳಿಬಿಟ್ಟೆ. ನಾನವಳ ಮುಖವನ್ನು ನೋಡುತ್ತಿರಲಿಲ್ಲ. ಆದರೆ, ಅವಳು ಅಳುತ್ತಿದ್ದಾಳೆನ್ನುವುದು ಖಚಿತವಾಗಿ ಗೊತ್ತಿತ್ತು. ಧ್ವನಿ ಮಾತ್ರ ಹೊರ ಬೀಳುತ್ತಿರಲಿಲ್ಲ. ಅವಳೆಂದಳು, ‘ನಾನು ನನ್ನ ಮೂವರು ಮಕ್ಕಳೊಂದಿಗೆ ಮನೆ ತೊರೆದು ಹೋಗುತ್ತೇನೆ’. ನನ್ನ ಕಾಲಕೆಳಗಿನ ನೆಲವೇ ಕುಸಿದಂತಾಯಿತು. ಪಾರೂ ಇರದೇ ಹೋದರೆ ನಾನು ಹೇಗೆ ಬದುಕಲಿ? ನಾನಂದೆ, ‘ನಾನೂ ಬರುತ್ತೇನೆ’. ‘ನಿಮಗೆ ಬರುವುದು ಸಾಧ್ಯವಿಲ್ಲ’ ಎಂದಳು. ‘ನಾನು ದಂಧೆ ಬಿಡುವುದಾಗಿ ಬಾಬೂಜಿಗೆ ಹೇಳುತ್ತೇನೆ. ನಗರಕ್ಕೆ ಹೋಗಿ ಶ್ರಮ ಪಡುತ್ತೇನೆ. ನಿಮ್ಮ ಬಿಜಿನೆಸ್ ಮರಳಿ ತೆಗೆದುಕೊಳ್ಳಿ ಎನ್ನುತ್ತೇನೆ.’ ಅವಳಿಗೆ ನನ್ನ ಮಾತಿನ ಮೇಲೆ ನಂಬಿಕೆಯಿರಲಿಲ್ಲ. ಆದರೆ, ನಾನೂ ಧೈರ್ಯವನ್ನು ತಂದುಕೊಂಡೆ. ಬಾಬೂಜಿ ಮನೆಯಲ್ಲಿ ಒಬ್ಬರೇ ಇದ್ದರು. ಮಧ್ಯಾಹ್ನದ ಸಮಯ. ನಾನೆಲ್ಲವನ್ನೂ ಹೇಳಿ ಬಿಟ್ಟೆ. ನಾನು ಅವರ ಮುಖದತ್ತ ನೋಡುತ್ತಿರಲಿಲ್ಲ. ಆದರೆ, ಅವರು ಕೋಪಿಸಿಕೊಂಡಿದ್ದಾರೆನ್ನುವುದು ನನ್ನ ಅರಿವಿಗೆ ಬಂದಿತ್ತು. ಅವರು ಕೋಪಿಸಿಕೊಂಡಾಗಲೆಲ್ಲ ಶಾಂತವಾಗಿ ಇರುತ್ತಾರೆ. ‘ಸರಿ ಹಾಗಾದರೆ’ ಎಂದಷ್ಟೇ ಹೇಳಿದರು. ಬಳಿಕ ಮರುದಿನದ ಮಧ್ಯಾಹ್ನ, ‘ಅಯ್ಯೋ ದೇವರೇ!’ ನಾನು ಅಂಗಡಿಗೆ ಹೋದೆ. ಕೊನೆಯ ದಿನವಾಗಿತ್ತು. ಕೆಲಸ ಮಾಡುವ ಹಾಗಿಲ್ಲ... ನಮ್ಮ ಕೆಲವು ವಸ್ತುಗಳನ್ನು ಎತ್ತಿಕೊಳ್ಳಬೇಕಿತ್ತು. ನಾನವುಗಳನ್ನು ಚೀಲದೊಳಗೆ ತುಂಬಿದೆ. ಅದರಲ್ಲಿ ನನ್ನ ಮುದ್ದಿನ ಬಚ್ಚಾ ಇರುವ ಡಬ್ಬಿಯಿತ್ತು. ಆಗಾಗ ನಾನದನ್ನು ಹೊರತೆಗೆದು ನೋಡುತ್ತಿದ್ದೆ. ನಾನು ಆ ಚೀಲವನ್ನು ಎದೆಗಪ್ಪಿ ಹಿಡಿದು, ಅಂಗಡಿಯನ್ನು ಮುಚ್ಚಿ ಹೊರಟೆ. ಗಿರಾಕಿಗಳನ್ನು ಮರಳಿ ಕಳಿಸಿದೆ. ಮನೆಗೆ ಬಂದೆ. ನನ್ನ ಕೋಣೆಯು ಒಳಗಿನಿಂದ ಚಿಲಕ ಹಾಕಲಾಗಿತ್ತು. ನಾನು ಬಾಗಿಲು ತಟ್ಟಿದೆ. ಬಹಳ ಹೊತ್ತು ಬಾಗಿಲು ತೆರೆಯಲು ಯಾರೂ ಬರಲಿಲ್ಲ. ಮಧ್ಯಾಹ್ನವಾಗಿದ್ದರಿಂದ ಎಲ್ಲರಿಗೂ ನಿದ್ದೆ ಬಂದಿರಬಹುದೇ ಎಂದು ನಾನು ಬಾಗಿಲ ಚಿಲಕ ಬಡಿಯುತ್ತಲೇ ಇದ್ದೆ. ಬಳಿಕ ಥಟ್ಟನೆ ಬಾಗಿಲು ತೆರೆದುಕೊಂಡಿತು. ನನ್ನ ಅಪ್ಪ ಅಂಗಿಯನ್ನು ಧರಿಸುತ್ತ ಹೊರಬಂದ. ಅವನು ಒಮ್ಮೆ ಮಾತ್ರ ದಿಟ್ಟಿಸಿದ. ನನಗೆ ಅರ್ಥವಾಗಲಿಲ್ಲ. ನಾನು ಒಳಗೆ ಹೋದೆ. ಪಾರೂ ನೆಲದ ಮೇಲೆ ಬಿದ್ದಿದ್ದಳು. ಅವಳ ಮೈಮೇಲೆ ಚೂರೂ ಬಟ್ಟೆಯಿರಲಿಲ್ಲ. ಚಹರೆ ಮಾತ್ರ ಕೂದಲಿನಿಂದ ಮುಚ್ಚಿಕೊಂಡಿತ್ತು. ಅವಳ ಮೈ ನಡುಗುತಲಿತ್ತು. ಆದರೆ, ಅಳು ಮಾತ್ರ ಹೊರ ಬೀಳುತ್ತಿರಲಿಲ್ಲ. ಕಿರಿಯ ಮಗ ದೂರ ಮೂಲೆಯಲ್ಲಿ ಹೆದರಿ ಕುಳಿತಿದ್ದ. ನನ್ನತ್ತ ನೋಡಿದ. ಅಂದರೆ, ಅವನ ಎದುರಿಗೆ? ನಾನು ಸತ್ತೇ ಹೋದೆ. ನನ್ನ ಸಾವಿರಾರು ತುಣುಕುಗಳು ಹಾರಿದವು. ಅನಂತರ ಕಾಡಿನಲ್ಲಿ ದಾರಿ ತಪ್ಪಿದ ಆಕಳು ಆಕ್ರಂದಿಸುವಂತೆ,

